170

ಮಾಣಿಯ ಮಡದಿಮಕ್ಕಳು

ಮತ್ತು

ಕನ್ನಡದ ಕವಿಗಳಿಗೆ ಕಿವಿಮಾತು

ಮಕಾರಾದಿ ಬಳ್ಳಿ ಅಕ್ಷರಗಳ ಶಬ್ದ ಜಾಲದಿಂದ
ರಚಿಸಿದ ವಿಚಿತ್ರ ಕಥೆ
ಮತ್ತು
ಕಕಾರಾದಿ ಬಳ್ಳಿ ಅಕ್ಷರಗಳ ಶಬ್ದ ಜಾಲದ
ಒಂದು ಲಘುಬರಹ.

ರಚಯಿತ: 'ರಸಿಕ', ಪುತ್ತಿಗೆ.

1958.

ಒಂದಾಣೆ ಮಾಲೆ

ಮಾಣಿಯ ಮಡದಿಮಕ್ಕಳು

ಮತ್ತು

ಕನ್ನಡ ಕವಿಗಳಿಗೆ ಕಿವಿಮಾತು

ಮಾಣಿಯ ಮಡದಿಮಕ್ಕಳು

ಮೂಡಬಿದ್ರೆಯಿಂದ ಮೂರು ಮೈಲಿನ ಮಜಲಿನ ಮುಳಿಮನೆಯಲ್ಲಿ ಮಾಧವಭಟ್ಟರಿದ್ದರು. ಮಾಧವಭಟ್ಟರ ಮಗ ಮಹೇಶ್ವರ ಭಟ್ಟರು. ಮಹೇಶ್ವರ ಭಟ್ಟರ ಮೂರನೇ ಮಗನೇ ಮಾಣಿ.

ಮಾಣಿ ಮೂಡಬಿದ್ರೆಯ ಮಜಲು ಮನೆಯವನಾದರೂ ಮನುಷ್ಯನಾಗಿ ಮೆರೆದಾಡಿದುದು ಮಂಗಳೂರಿನಲ್ಲಿ. ಮಜಲುಮನೆ ಮಾಣಿಯೆಂದರೆ ಮನುಷ್ಯರನ್ನು ಮಾತಿನಲ್ಲೇ ಮೋಹಿಸುವ ಮಾಟಗಾರ. ಮಗುವಿನಂಥ ಮುಗ್ಧ ಮನಸ್ಸು; ಮನ್ಮಥನ ಹಾಗೆ ಮುಖಮುದ್ರೆ. ಮೂರುಹೊತ್ತೂ ಮುಖದಲ್ಲಿ ಮುಗುಳುನಗು.

ಮಾಣಿಯೊಮ್ಮೆ ಮಹಾನವಮಿಗೆಂದು ಮಂಗಲ್ಪಾಡಿಗೆ ಹೋದಾಗ ಮಂಗಲ್ಪಾಡಿ ಮುಡಿಪು ಮಾಲಿಂಗಭಟ್ಟರು ಮುಖತಃ ಮಾತಾಡಿದರು. ಮಾಣಿಯ ಮಾತುಗಾರಿಕೆಗೆ ಮಾರುಹೋದ ಮಾಲಿಂಗಭಟ್ಟರು ಮುದ್ದು ಮಗಳಾದ ಮಾಲತಿಯನ್ನು ಮದುವೆಯಾಗೆಂದು ಮನವಿಮಾಡಿಕೊಂಡರು.

ಮಾಣಿಯೂ ಮಾಲಿಂಗಭಟ್ಟರ ಮಾತಿಗೆ ಮರುಳಾದ. ಮಾಲತಿಯ ಮುಗುಳುನಗುವ ಮುದ್ದು ಮುಖ, ಮಾಟವಾದ ಮೈಗಟ್ಟು ಮಾಣಿಯ ಮನಸ್ಸು ಮರುಳಾಗುವಂತೆ ಮಾಡಿದುವು. ಮರುದಿನವೇ ಮನೆಯಲ್ಲಿ ಮಹೇಶ್ವರ ಭಟ್ಟರನ್ನು ಮದುವೆಗಾಗಿ ಮರೆಹೊಕ್ಕ. ಮದುವೆಯ ಮಾತೂ ಮುಗಿಯಿತು. ಮದುವೆಯೂ ಮುಗಿಯಿತು. ಮದುವೆ ಮುಗಿದರೆ ಮತ್ತೆಲ್ಲಾ ಮುಗಿಯದಿರುತ್ತದೆಯೆ?

ಮಾಣಿ-ಮಾಲತಿಯರಿಗಾಗಿ ಮಾಲಿಂಗಭಟ್ಟರು ಮಂಗಳೂರಿನಲ್ಲಿ ಮೂರು ಮಹಡಿಯ ಮನೆಯನ್ನು ಮಾಡಿಸಿದರು. ಮಂಗಳೂರು ಬ್ಯಾಂಕಿ

ನಲ್ಲಿ ಮೂವತ್ತು ಸಾವಿರವನ್ನೂ ಮುಡಿಪಾಗಿಟ್ಟರು — ಮಾಣಿ ಮಾಲತಿ ಯರಿಗಾಗಿ.

ಮಾಣಿ ಮನೆಯಲ್ಲೇ ಮೂರುಹೊತ್ತು ಮುದುಡಿಕೊಂಡು ಮಾಲತಿ ಯೊಡನೆ ಮಾತಾಡುತ್ತಾ ಮಸಾಲದೋಸೆ ಮುಕ್ಕುತ್ತಾ ಮೈಗಳ್ಳನಾದ.

ಮದುವೆಯಾಗಿ ಮೂವತ್ತು ಮಾಸಗಳು ಮುಗಿದುವು.

o o o o o

ಮತ್ತೊಂದು ದಿನ ಮಾಲತಿ ಮಂಗಳಮುಹೂರ್ತದಲ್ಲಿ ಮೂರು ಮಕ್ಕಳ ಮಾತೆಯಾದಳು. ಮಂಗಳೂರಿನ ಮಹನೀಯರ ಮುಂಬೆರಳು 'ಮೂರು ಮಕ್ಕಳು!' ಎಂದು ಮೂಗಿಗೇರಿತು. ಮಾಣಿಯು ಮೂರು ಮಾಸದ ಮತ್ತೆ ಮಂಗಳಮಯ ಮಾತುಗಳನ್ನು ಮಾವಯ್ಯನಾದ ಮಾಲಿಂಗ ಭಟ್ಟರಿಗೆ ಮನವಿಮಾಡಿದ.

ಮಿಸ್ಟರ್ ಮಾಣಿ,
"ಮಂಗಳಾದೇವಿ"
ಮಂಗಳೂರು — ಮೂರು.

ಮಂಗಳವಾರ,
3—3—33.
(ಮೂರು-ಮೂರು-ಮೂವತ್ಮೂರು)

ಮಂಗಲ್ಪಾಡಿಯ ಮಾವಯ್ಯನವರಾದ ಮಹಾರಾಜೇಶ್ರೀ ಮಹತೋ ಮಹಾತ್ಮ ಮಾಲಿಂಗಭಟ್ಟರಿಗೆ.

ಮೂಡಬಿದ್ರೆ ಮಜಲುಮನೆ ಮಾಧವಭಟ್ಟರ ಮೊಮ್ಮಗ ಮಹೇಶ್ವರ ಭಟ್ಟರ ಮಗ ಮಾಣಿಯ ಮನವಿಗಳು.

ಮಾವಯ್ಯ!

ಮನೆಯಲ್ಲಿ ಮೂರು ಮಕ್ಕಳೂ ಸಹಿತ ಮಡದಿಯಾದ ಮಾಲತಿಯೂ ಸಹ ಮಂಗಳ. ಮೇಲಾಗಿ ಮಮತೆಯ ಮಡದಿಗೆ ಮಕ್ಕಳಾದುದೂ, ಮಕ್ಕಳು ಮೂರೆಂದೂ ಮೊದಲೇ ಮನವಿಮಾಡಿಕೊಂಡಿದ್ದೇನೆ. ಮಂಗಳ ವಾರ ಮಕರ ಮಧ್ಯದ್ರೇಕ್ಕಾಣ ಮುಹೂರ್ತ. ಮೂಲಾನಕ್ಷತ್ರದ ಮೂರನೇ ಪಾದ. ಮುದ್ದುಮುದ್ದಾದ ಮಕ್ಕಳು ಮುಂಗುಸಿಯ ಮರಿಯಂತಿವೆ. ಮಾತಾಡಿದರೆ ಮುಖ ನೋಡುತ್ತವೆ. ಮಾಲತಿಯಂತೂ ಮೂರುಹೊತ್ತೂ ಮಕ್ಕಳನ್ನು ಮಡಿಲಲ್ಲೆ ಮಲಗಿಸಿಕೊಂಡು ಮುದ್ದಾಡುತ್ತಾಳೆ. ಮನೆಗೆಲಸ ಮಾಣಿಯ ಪಾಲು. ಮಾಲತಿಯ ಮನಸ್ಸಿನಲ್ಲಿ ಮರುಕವೊಂದಿದೆ. ಮಾಣಿ

ಯ ಕೈಯಲ್ಲಿ ಮುಕ್ಕಾಲಿಲ್ಲ. ಮನೆಯಲ್ಲಿ ಮಲಗಲು ಮಕ್ಕಳಿಗೆ ಮರದ ಮಂಚವಿಲ್ಲ.

ಮಾವಯ್ಯಾ! ಮಮತೆಯ ಮೊಮ್ಮಕ್ಕಳ ಮೇಲೆ ಮರುಕ ತೋರಿ ಮಮತೆಯಿಟ್ಟು ಮರುವಡಿ ಮುಟ್ಟಿದ ಮರು ಮುಹೂರ್ತದಲ್ಲೇ ಮಂಚ ಮೂರನ್ನು ಮಂಗಲ್ಪಾಡಿಯ 'ಮದಾಲಸಾ ಲಾರಿ'ಯಲ್ಲಿ ಮಂಗಳೂರಿಗೆ ಮುಟ್ಟಿಸಿರಿ.

ಮಾಮಾ! ಮಗಳಾದ ಮಾಲತಿಯ ಮುಖ, ಮದುವೆಯ ಮೂರನೇ ದಿನದಿಂದ ನೋಡಿಲ್ಲ. ಮಕ್ಕಳೂ ಮೂರಾದುವು. ಮಗಳು ಮಾಣಿಯ ಮಾಳಿಗೆಯಲ್ಲಿ ಮರುಗುತ್ತಾ ಮೂಲೆಯಲ್ಲಿರುವಳೆಂದು ಮರುಗಬೇಡಿ.

ಮಾತುಮಾತಿಗೂ ಮಾರುದ್ದದ ಮರುತ್ತರಕೊಡಲು ಮೂತಿ ಮುಂದೆಮಾಡಿ ಮೂಗುಮುರಿಯುವಂತೆ ಮಾತಾಡಿ ಮಾಣಿಯ ಮಾನವನ್ನು ಮೂರು ಮಾಳಿಗೆಯ ಮನೆಯಲ್ಲಿ ಮೂರುಕಾಸಿಗೆ ಮಾರುವ ಮಾಲತಿಯ—ಮಮ ಮಡದಿಯ—ಮೂಗು ಮುಸುಡುಗಳನ್ನು ಮುದ್ದೆ ಮಾಡುವ ಮಹತ್ಕಾರ್ಯ ಮಾಡಿಲ್ಲ. ಮಾಣಿಯು ಮನುಷ್ಯ. ಮೂರು ಮೂರ್ತಿಗಳೇ ಮುನಿದರೂ ಮಾಣಿ ಮಾಲತಿಯನ್ನು ಮುನಿದು ಮರೆಯಲಾರ.

ಮೊನ್ನೆ ಮುನಿಯಾಲಿನ ಮಂಗಳನು ಮಂಗಳೂರಿಗೆ ಬಂದವನು ಮನೆಗೆ ಬಂದ. ಮಾಲತಿ ಮನೆಮಾತೆಲ್ಲ ಮಂಗಳನಿಗೆ ಮನವಿಮಾಡಿ ಕೊಂಡಳು! ಮಾನವಿದೆಯೆ?

ಮನಸ್ಸು ಮರುಗಿಸಿಕೊಂಡೆನೇ ವಿನಹ ಮಾತೆತ್ತಲಿಲ್ಲ. ಮಂಚದೊಂದಿಗೆ ಮೂರು ಮುಡಿ ಮುಂಡಕ್ಕಿಯನ್ನು ಮುಟ್ಟಿಸಿರಿ. ಮರೆತರೆ ಮತ್ತೆ ಮಾವನಿಲ್ಲ. ಮಾಣಿಯೂ ಮನುಷ್ಯನಲ್ಲ! ಮತ್ತೇನಿಲ್ಲ.

ಮಾಣಿ.

ಮಾಣಿಯ ಮರುವಡಿ ಮುಟ್ಟಿದ ಮರುಕ್ಷಣವೇ ಮಾಲಿಂಗಭಟ್ಟರು ಮರಬಿಟ್ಟ ಮಂಗನಾದರು. ಮಂಗನಿಗೆ ಮಾಕಾಳಿ ಮೈಮೇಲೆ ಬಂದಂತೆ ಮಡದಿ ಮಾದೇವಿಯೊಡನೆ ಮಾತಾಡಿದರು.

ಮರುದಿನ ಮಾಣಿಯನ್ನು ಕುರಿತು ಮಗಳಾದ ಮಾಲತಿಗೇ ಮಾರೋಲೆ ಬರೆದರು—

ಮಗಳೇ ಮಾಲತಿ!

ಮಾಣಿಯು ಮಾರುದ್ದದ ಮನವಿಯಲ್ಲಿ ಮಾತಿನ ಮೇರೆ ಮೀರಿದೆ. ಮಕ್ಕಳ ಮೇಲೂ ಮಗಳ ಮೇಲೂ ಮಮತೆ ಮಾವನಿಗಿಲ್ಲವೆಂದು ಮಾಣಿಯು ಮಾತುಗಳಿ? ಮಂಗನಂತೆ ಮಾತಾಡುತ್ತಾನೆ. ಮಳೆಗಾಲದ ಮಧ್ಯದಲ್ಲಿ ಮುಂಡಕ್ಕಿಯನ್ನೂ ಮಕ್ಕಳಿಗಾಗಿ ಮೂರು ಮರದ ಮಂಚಗಳನ್ನೂ ಮಂಗಲ್ಪಾಡಿಯಿಂದ ಮಂಗಳೂರಿಗೆಂತು ಮುಟ್ಟಿಸಲಿ? ಮಾರುದ್ದ ಮಾತಾಡುತ್ತಾನೆ! ವಿನಹ ಮಂಡೆಯಲ್ಲಿ ಮೆದುಳಿಲ್ಲ.

ಮದುವೆಯ ಮಂಟಪದಲ್ಲಿ ಮಾಡಿಸಿಕೊಡುತ್ತೇನೆಂದು ಮಾತು ಕೊಟ್ಟುದಕ್ಕಾಗಿ ಮಾಡಿಸಿಕೊಟ್ಟ ಮುತ್ತಿನ ಮಾಲೆಯನ್ನು ಮಾರಿತಿಂದ. ಮರ್ಯಾದೆಕೆಟ್ಟವ. ಮೂರುಕಾಸಿನವ. ಮಾನಕೆಟ್ಟು ಮಾವಾ, ಮಕ್ಕಳಿಗೆ ಮೂರು ಮಂಚ ಮಾಡಿಸಿ, ಮುಂಡಕ್ಕಿ ಕಳಿಸಿ, ಮುಕ್ಕಾಲಿಲ್ಲವೆಂದು ಮರುಗುತ್ತಾನೆ.

ಮಾಲತೀ! ಮನುಷ್ಯನಿಗೆ ಮರ್ಯಾದೆ ಮುಖ್ಯ! ಮಾವನು ಮಾತೆತ್ತಿದರೆ ಮೂರುಕೋಲು ಮಂಗನಂತೆ ಮಾತಾಡುತ್ತಾನೆ. ಮುತ್ತಿನ ಮಾಲೆಯನ್ನು ಮಾರಿ ಮಂಗಳಸೂತ್ರ—ಮೂಗುತಿಗಳನ್ನು ಮಾರಲು ಮಾಡುವ ಮುತ್ತಿಗೆಯೇ? ಮಾಡಲಿ, ಮಾಡಲಿ! ಮದ್ಯಪಾನವನ್ನೂ ಮಾಡುತ್ತಾನಂತೆ.

ಮಹೇಶ್ವರಾ! ಮುದ್ದಾದ ಮಗಳನ್ನು ಮತಿಹೀನನೂ ಮೈಗಳ್ಳನೂ ಆದ ಮಾಣಿಗೆ ಮದುವೆಮಾಡಿ ಮರ್ಯಾದೆ ಮಾಸಿತು.

ಮತ್ತೇನಿಲ್ಲ. ಮಂಚವನ್ನೂ ಮುಂಡಕ್ಕಿಯನ್ನೂ ಮಳೆಗಾಲ ಮುಗಿದ ಮೇಲೆ ಮುಟ್ಟಿಸುತ್ತೇನೆ. ಮಾಣಿಯೊಡನೆ ಮಿತಿಮೀರಿ ಮಾತೆತ್ತದಿರು. ಮಹಾ ಮುನಿಸುಗಾರ.

ಮಕ್ಕಳಿಗೆ ಮಂಗಳಾಶೀರ್ವಾದಗಳು!

ಮಾಲಿಂಗಭಟ್ಟ.

ಮಾಣಿಯು ಮಾಲತಿಯ ಮುಖಾಂತರದ ಮಾವನ ಮಾರೋಲೆಯ ಮಾತುಗಳನ್ನು ಮನದಟ್ಟಾಗಿಸಿದನು. ಮುನಿಸು ಮತಿಗೆಡಿಸಿತು! ಮರು ದಿನವೇ ಮಾವನ ಮಾತಿಗೆ ಮಾತಿತ್ತ—

ಮಂಗಳೂರು,
31—3—33.

ಮಮತೆಯಿಲ್ಲದ ಮಾವಯ್ಯ!

ಮೊನ್ನೆಯ ಮಾರೋಲೆ ಮಾಲತಿಗೆ ಮುಟ್ಟಿ ಮಾಣಿಗೆ ಮನದಟ್ಟಾಯಿತ್ತು! ಮಂಚವನ್ನೂ ಮುಂಡಕ್ಕಿಯನ್ನೂ ಮರೆತು—ಮಾಣಿಯು ಮದ್ಯಪಾನ ಮಾಡುತ್ತಾನೆನ್ನಲು ಮರೆಯಲಿಲ್ಲ. ಮರ್ಯಾವೆ ಮರೆತವರು! ಮಾಣಿಯ ಮಾತುಗಳು ಮೇರೆ ಮೀರಿದ್ದುವಂತೆ! ಮಹಾ ಮರ್ಯಾದೆಯವರು! ಮಳೆಗಾಲವಾದರೇನಂತೆ! ಮನಸ್ಸಿದ್ದರೆ ಮಾರ್ಗವಿದೆ. ಮಂಗಲ್ಪಾಡಿಯಿಂದ ಮಂಗಳೂರಿಗೆ ಮಾರ್ಗವಿಲ್ಲವೆ? ಮದಾಲಸಾಲಾರಿಯಿಲ್ಲವೆ?

ಮದುವೆಯ ಮೊದಲು ಮಗಳ ಮನೆಮಾರಿಗಾಗಿ ಮೂರು ಸಾವಿರ ರೂ. ಮಾಣಿಗೆ ಮುಟ್ಟಿಸುತ್ತೇನೆಂದು ಮಾತಿತ್ತು ಮದುವೆಯಂದು 'ಮತ್ತೆ'ಯೆಂದು ಮೋಸಮಾಡಿ, ಮಗಳಿಂದ ಮಾಣಿಯನ್ನು ಮರುಳುಮಾಡಿಸಿ, ಮದ್ದು ಹಾಕಿಸಿ, ಮಾಟಮಾಡಿಸಿ, ಮಂಗ ಮಾಡಿದ್ದನ್ನು ಮರೆತಿಲ್ಲ. ಮಂಗಳೂರಲ್ಲೊಂದು ಮುದಿಯಾಳಿಗೆ ಮನೆ ಮಾಡಿಸಿದರೇನು ಮಹಾ?

ಮತ್ತು, ಮದುವೆಯಂದು ಮಾಣಿಯು ಮಾಡಿಸಿದ್ದ ಮುತ್ತಿನ ಮಾಲೆ ಮಾವನ ಗಂಟಲ್ಲ, ಮಾಣಿಯ ಮಾತೆಯಾದ ಮಾಲಕ್ಷ್ಮಮ್ಮನದ್ದು. ಮಾರುವುದು ಮಾರದಿರುವುದು ಮಾಣಿಯ ಮರ್ಜಿ. ಮೂಗುತಿ, ಮೂರೆಳೆಯ ಮಂಗಳಸೂತ್ರ ಮಾಡಿಸಿದ್ದೂ ಮಾಣಿಯೇ. ಮನಬಂದರೆ ಮಾರಿಯೇನು. ಮಗಳ ಮದುವೆ ಮುಗಿಸಿದ ನಂತರ ಮಾತೇನು? ಮೊದಲ ಸಲ ಮಂಗಳೂರಿಗೆ ಬಂದು ಮದ್ಯಪಾನಮಾಡಿ ಮಧ್ಯರಾತ್ರಿ ಮನೆಗೆ ಬಂದು ಮಗಳನ್ನು ಮಾತಾಡಿಸಿದವರೂ ಮಾವನೇ! ಮಾಣಿಯಲ್ಲ!

ಮಾಣಿಯ ಮೇಲುಮಟ್ಟದ ಮನೆತನಕ್ಕೆ ಮತಿಗೆಟ್ಟ ಮಾನಹೀನ ಮಾವಯ್ಯನಾದಿರಿ. ಮಾಲತಿಗೆ ಮರುಳಾಗಿ ಮಾಲೆಹಾಕಿದ್ದಕ್ಕಾಗಿ ಮರುಗುತ್ತಿದ್ದೇನೆ. ಮರ್ಯಾದಸ್ಥನಾದ ಮಾಣಿ ಮನೆಗೆಲಸ ಮಾಡಬೇಕೆ? ಮಾಮಿಗೆ ಮೂರು ತಿಂಗಳು ಮನೆಯಲ್ಲಿದ್ದರೇನಂತೆ?

ಮಾವಯ್ಯ! ಮತ್ತೆ ಮಾತನಾಡದೆ ಮಾತು ಮುಗಿಸಿ! ಮಾಣಿಯ ಮನಸ್ಸನ್ನು ಮರುಗಿಸಬೇಡಿ. ಮಂಚ ಮೂರನ್ನು ಮರುಕ್ಷಣವೇ ಮುಟ್ಟಿಸಿರಿ. ಮುಟ್ಟಿಸದಿದ್ದರೆ ಮಂಗಳಾದ ಮಾಲತಿಯನ್ನು ಮೂರೂ ಮಕ್ಕಳೊಂದಿಗೇ ಮನೆ ಮುಟ್ಟಿಸಿಯೇನು. ಮತ್ತೆ ಮಾಲತಿ ಮಾಣಿಯ ಮಡದಿಯಲ್ಲ! ಮರೆಯ ಬೇಡಿ! ಮೊದಲನೆಯ ಮುಂಜಾಗ್ರತೆ!

ಮಾಣಿ.

ಮಾಣಿಯ ಮಾರುತ್ತರ ಮುಟ್ಟಿದ ಕೂಡಲೇ ಮಾಲಿಂಗ ಭಟ್ಟರು ಮುದಿ ಮೀಸೆ ಮುಟ್ಟಿ ನೋಡಿದರು. ಮರುದಿನ ಮುಂಜಾನೆಯೇ ಮರುಪತ್ರ—

ಮುದುಮಗ ಮಾಣಿ!

ಮಾರೋಲೆ ಮುಟ್ಟಿತು. ಮುದಿಮಾವನೆನ್ನುವ ಮರುಕವನ್ನು ತೋರಿಸಿಲ್ಲ.

ಮಾವನ ಮಾತಿಗೆ ಮುನಿದು ಮಗಳನ್ನೂ ಮಕ್ಕಳನ್ನೂ ಮನೆಗೆ ಮುಟ್ಟಿಸುವೆಯಾ? ಮಾವ ಮುದಿಯನಾದರೂ ಮಂಡೆ, ಮೆದುಳು ಮುದಿಯಲ್ಲ. ಮಂಗಳೂರಿನ ಮುನಿಸಿಫ್ ಕೋರ್ಟಿ ಮೆಟ್ಟಲೇರಬೇಕಾದೀತು! ಮೇಲಾಗಿ ಮನೆಮಠಗಳನ್ನು ಮಾರಿ ಮುಕ್ಕಾಲಿಲ್ಲದೆ ಮಾಲತಿ, ಮಕ್ಕಳು, ಮನೆಗಳಿಗಾಗಿ ಮಾವನನ್ನೇ ಮರೆಹೊಗಬೇಕಾದೀತು!

ಮದುವೆಯ ಮೊದಲಿನ ಮಾತೆತ್ತುವೆಯಾ? ಮಾಲಕ್ಷ್ಮಮ್ಮ ಮೂರು ತಿಂಗಳ ಮೊದಲು ಮಾಳಿಗೆ ಮೆಟ್ಟಲಿನಿಂದ ಮಗುಚಿಕೊಂಡು ಮೂಳೆ ಮುರಿದಾಗ ಮದ್ದು ಮಾಡಿಸಲು, ಮಾಳಿಗೆ ಮನೆಯ ಮಂಟಪಕ್ಕೆ ಮೆರುಗಿನ ಮುಚ್ಚಿಗೆ ಮಾಡಿಸುವಾಗ--ಮಜಲುಗದ್ದೆ ಮಾರಿದಾಗ ಮೂರು ಸಾವಿರದ ಮುನ್ನೂರು ರೂ. ಮುಗಿಸಿದವನು ಮಾವಯ್ಯನಾದ ಮಾಲಿಂಗ ಭಟ್ಟನೆಂದು ಮರೆತೆಯಾ?

ಮರುಳನಂತೆ ಮಾವ ಮಂಗಳೂರಿಗೆ ಬಂದು ಮದ್ಯಪಾನಮಾಡಿದನೆಂದು ಮಾತಾಡಿದರೆ ಮರ್ಯಾದೆಗೆ ಮುಟ್ಟುಗೋಲು, ಮಂಗಳೂರಿನವರು ಮೋರೆಗೆ ಮಂಗಳಾರತಿ ಮಾಡಿಯಾರು! ಮಂಗಳೂರಲ್ಲಿ ಮದ್ಯವೇ ಇಲ್ಲ.

ಮಾಲತಿಯನ್ನು ಮದುವೆ ಮಾಡಿ—ಮಂಗನ ಕೈಗೆ ಮಾಣಿಕ್ಯ ಕೊಟ್ಟ ಮಾತಾಯ್ತು! ಮನೆಗೆಲಸಕ್ಕಾಳು ಮಾಡದೆ ಮೇಲುಮುಟ್ಟದವನೆಂದು ಮಾತಾಡುವೆಯಾ? ಮುದಿ ಮಾವಿಯನ್ನು ಮನೆಗೆಲಸ ಮಾಡಲು ಹೇಳುವೆಯಾ?

ಮಹಾ ಮೂರ್ಖ!

ಮಾಲಿಂಗ ಭಟ್ಟರು.

ಮನೆಯಿಂದ ಮಾರೋಲೆ ಮುಟ್ಟದಂದಿನಿಂದ ಮಾಲತಿ ಮುನಿಸು ಗೊಂಡದ್ದನ್ನು ಮಾಣಿ ಮನಗಂಡ. ಮಮತೆಯ ಮಗಳಿಗೆ ಮೂರು ಮಕ್ಕಳ ಮುಖ ಕಾಣಿಸಿದ ಮಾಣಿಯನ್ನು ಮರ್ಯಾದೆಯಿಲ್ಲದೆ ಮಾತಾಡಿಸುವುದೆ? ಮಾಣಿಗೆ ಮಾವನೇ ಮದ್ಯಪಾನಮಾಡುತ್ತಾನೆನ್ನುವುದೂ ಮಾಲತಿಯ ಮುನಿಸಿಗೆ ಮತ್ತೊಂದು ಕಾರಣ. ಮಾಲತಿಯ ಮುನಿಸಿನಿಂದ ಮಾಣಿಯೂ ಮೆತ್ತಗಾದ.

ಮತ್ತೊಂದು ದಿನ ಮೆಲ್ಲನೆ ಮಾತಾಡಿಸಿದ...."ಮಾಲತೀ....ಮಾಲೂ ....ಮಾಲೀ...."

"ಮುಚ್ಚುಗಣ್ಣು ಬಿಚ್ಚು ಮುದ್ದೂ......ಮುಖಮುಚ್ಚಿ ಮುದುಡಿ ಕೊಂಡರೆ ಮಕ್ಕಳಿಗೆ ಮೊಲೆಯುಣಿಸುವವರಾರು? ಮಾವನಿಗೆ ಮುದುಪು! ಮಾಣಿಗೆ ಮರುಳು! ಮಾತನ್ನೆಲ್ಲ ಮರೆತುಬಿಡು! ಮನ್ನಿಸು ಮುದ್ದು....!"

"ಮಾಲೂ ಮಾಲತೀಂತ ಮಾತೇಕೀಗ?"

ಮಾಲತಿಯ ಮಾತು ಮೊನಚಾಗಿತ್ತು. ಮಾಣಿ ಮರುಮಾತಾಡದೆ ಮುಖ ಮುಚ್ಚಿಕೊಂಡು ಮರಳಿದ.

ಮರುದಿನ ಮಾಣಿ ಮಾಲತಿಯ ಮನಸ್ಸಮಾಧಾನಮಾಡಬೇಕೆಂದು ಮನವಿ ಮಾಡಿದ—ಮಾವಿಗೆ.

ಮಾರನೇ ದಿನವೇ ಮಾಲತಿಯೂ ಮಾತೆಗೊಂದು ಮರುವಡಿ ಬರೆದಳು.

ಮಮತೆಯ ಮಾತೇ!

ಮೋಹದ ಮಗಳನ್ನು ಮರೆತೆಯಾ? ಮಾತೆಯಾಡಿದ ಮಾತು ಮಹತ್ವದೆಂದು ಮಾಣಿಯನ್ನು ಮದುವೆಯಾದೆನೇ ವಿನಹಾ ಮಾಣಿ

ಮನ್ಮಥನೆಂದಲ್ಲ. ಮಹಾ ಮೇಧಾವಿಯೆಂದೂ ಅಲ್ಲ. ಮರ್ಯಾದೆಯ ಮನೆತನವೆಂದಂದುಕೊಂಡರೆ ಮನೆಮಾತು ಹೀಗಾಗಬೇಕೆ?

ಮರುಗುತ್ತಿದ್ದೇನೆ!

ಮನೆಯೊಳಗಿದ್ದು ಮಡಿಕೆ ಮಡಿಮಾಡುವವಳು ಮತ್ತೇನು ಮಾಡಿಯಾಳು?

ಮಾಣಿ ಮತಿಹೀನನಲ್ಲ. ಮಹದಾನಂದವಿತ್ತು ಮದುವೆಯಾದ ಮೂವತ್ತು ಮಾಸ ಮಾಡಲೇನು? ಮೂರು ಮಕ್ಕಳ ಮಾತೆಯಾದೆ. ಮೈಗಟ್ಟು ಮಾಯವಾಯ್ತು. ಮಾಣಿಯ ಮನಸ್ಸಿಗೆ ಶಾಂತಿ ಇಲ್ಲ. ಮಾಮ ಮಾಣಿಯರ ಮುಖಾಮುಖಿ, ಮುತ್ತಿನ ಮಾಲೆಯ ಮೋಸ. ಮೂರುಸಾವಿರದ ಮಾತು, ಮಂಚ ಮರೆತದ್ದು, ಮಂಗನೆಂದು ಮೂರ್ಖನೆಂದು ಮರ್ಯಾದೆ ತೆಗೆದ ಮುನಿಸು, ಮತ್ತೆ ಮೂರು ಮಕ್ಕಳು ಮುಕ್ಕಾಲಿಲ್ಲದ ಮಹಾಪ್ರಸಂಗ ಮುಂತಾದುವುಗಳಿಂದ ಮಾಣಿಯು ಮಮ್ಮಲ ಮರುಗಿ ಮೊನ್ನೆಯಿಂದ ಮನೆಗೆ ಮುಖವೇ ಮಾಡಿಲ್ಲ. ಮಾಲತಿಯನ್ನೂ ಮರೆತಂತಿದೆ.

ಮಮತೆಯ ಮಗಳನ್ನು ಮರೆತೆಯಾ?

ಮೊಲೆಯೂಡಿ ಮಣ್ಣೆಯುಣ್ಣಿಸಿದ ಮಮತೆಯ ಹೃದಯ ಮರವಾಯ್ತೆ? ಮಾಣಿಯ ಮನಸ್ಸಮಾಧಾನ ಮಾಡಲಾರೆಯಾ?

ಮಮ್ಮೀ, ಮನದನಿಯನ ಮಾತೇ ಮಡದಿಗೆ ಮುರಲಿ. ಮಿಲನವೇ ಮಿಷ್ಟಾನ್ನ.

ಮನೆಯವರ ಮಾಮನೊಡನೆಯ ಕಾಳಗ ಮಿತಿಮೀರಿದ ಮಾತಿನ ಮಾರಾಮಾರಿ ಮರ್ಯಾದೆಯ ಮಟ್ಟ ಮರೆತಿದೆ. ಮನಸ್ಸು ಮಿಡುಕುತ್ತಿದೆ. ಮೆದುಳು ಮಸಕಾಗುತ್ತಿದೆ. ಮನೆಗಳೆರಡರ ಮರ್ಯಾದೆ ಮುಳುಗದಂತೆ ಮಗಳು ಮಕ್ಕಳು, ಮರದಡಿಯ ಮಂಗಗಳಾಗದಂತೆ ಮನೆಯವರು ಮೊದಲಿನಂತಾಗುವಂತೆ ಮಾಡಮ್ಮ. ಮಾಲತಿಯ ಮೂಗುತಿ ಮಂಗಳಸೂತ್ರ ಮಿರಿ ಮಿರಿ ಮಿರುಗುವಂತೆ ಮಾಡಿ "ಮಾಮ–ಮಾಣಿ"ಯರ ಮನೋ–ವೈಷಮ್ಯ ಮುಗಿಯುವಂತೆ ಮಾಡು.

ಮರೆಯದಿರೆಂದು ಮಾಣಿಯ ಮಡದಿ

ಮಾಲತಿ.

ಮಾದೇವಿಗೆ ಮಾಲತಿಯ ಮನವಿ ಮುಟ್ಟುತ್ತಲೇ ಮಾರುತ್ತರವಿತ್ತರು.

ಮಗಳಾದ ಮಾಲತಿಗೂ ಮಾಣಿಗೂ ಮಕ್ಕಳಿಗೂ ಮಾದೇವಿಯು ಮಾಡುವ ಮಂಗಳಾಶೀರ್ವಾದ.

ಮಗೂ ಮಾಣಿ,

ಮಾರೋಲೆ ಮರುವಲಿಗಳಿಂದು ಮುನಿಸು ಮಿಗಿಲಿಸಬೇಡ. ಮಾವಯ್ಯ ಮುಂಗೋಪಿ. ಮುದುಕನಾದರೂ ಮಾತುಗಾರ. ಮುನಿದರೆಂದರೆ ಮುಕ್ಕಣ್ಣನೇ. ಮತ್ತೂ ಮುದುಕರ ಮುನಿಸು ಮಹಾ ಮೋಸ. ಮರೆತು ಬಿಡು. ಮನಸ್ಸಿನ ಮರುಕವನ್ನು ಮುಗಿಸು.

ಮಳೆಗಾಲಕ್ಕಾಗಿ ಮೂರು ಮೂಟೆ ಮೆಣಸು ಮುಂಡಕ್ಕಿ, ಮರದ ಮಂಚ ಮೂರು, ಮುನ್ನೂರು ರೂ., ಮಕ್ಕಳಿಗಾಗಿ ಮೆತ್ತನೆಯ ಮೆತ್ತೆ (ಹಾಸಿಗೆ) ಮೇಲಿನ ಮಂಗಳವಾರದೊಳಗಾಗಿ ಮಂಗಳೂರಿಗೆ ಮುಟ್ಟಿಸುವೆನು. ಮತ್ತೊಂದು ಮಾತು.—ಮೇಲಿನ ಮೂಟೆ, ಮಂಚದ ಮಾತುಗಳನ್ನು ಮಾವಯ್ಯನಿಗೆ ಮುಟ್ಟಿಸಬೇಡ. ಮುನಿದಾರು! ಮತ್ತೆ ಮಾಮಿಗೆ........?

ಮಗಳೇ ಮಾಲತಿ, ಮಾಣಿಯ ಮನಸ್ಸು ಮರುಗಿಸಬೇಡ. ಮಳೆಗಾಲ! ಮಕ್ಕಳನ್ನು ಮಂಚದಲ್ಲೇ ಮಲಗಿಸು. ಮನೆಗೆಲಸವನ್ನೂ ಮಾಡು. ಮಕ್ಕಳನ್ನು ಮಿತಿ ಮೀರಿ ಮೀಯಿಸಬೇಡ.

ಮಕ್ಕಳೇ, ಮಂಗಳಾದೇವಿಯೂ ಮಾರಮ್ಮನೂ ಮಂಗಳಮಾಡಲಿ.

ಮಾದೇವಿ.

ಮರುದಿನ ಮಾಮಿಯ ಮಾತನ್ನು ಮಾಲತಿಯಿಂದರಿತ ಮಾಣಿ ಮುಗುಳುನಕ್ಕನು. ಮುಖವನ್ನು ಮರೆತು, ಮಾಲತಿಯೂ ಮುಸುಮುಸು ನಕ್ಕಳು.

ಮೇಲಿನ ಮಂಗಳವಾರವೂ ಬಂತು. ಮಂಚ ಮೂರು, ಮುಂಡಕ್ಕಿ ಮೂಟೆ, ಮೆಣಸಿನ ಮೂಟೆ ಮೂರು ಮೂರು ಮುಟ್ಟಿದುವು. ಮಾಲತಿ ಮಕ್ಕಳನ್ನು ಮುದ್ದಾಡಿ ಮಂಚದಲ್ಲಿ ಮಲಗಿಸಿ ಮುಂಡಕ್ಕಿ ಮುಕ್ಕಿಸಿದಳು.

ಮಾಣಿ ಮೆಲ್ಲನೆ ಮಾಲತಿಯ ಮುಖದ ಹತ್ತಿರ ಮುಖಮಾಡಿ “ಮಾಲತೀ ಮಾಲೂ……ಮಾಮಿ……” ಎಂದ ಮೆಲ್ಲನೆ

ಮರುದಿನದಿಂದ ಮಾಲತಿಯೂ ಮಾಣಿಯೂ ಮಕ್ಕಳೂ ಮಂಗಳೂರಿನ ಮಾಳಿಗೆ ಮನೆಯಲ್ಲಿ ಮಂಗಳವಾಗಿ ಇದ್ದರು.

■■■■■■■■■

ಕನ್ನಡದ ಕವಿಗಳಿಗೆ ಕಿವಿಮಾತು

ಕನ್ನಡಿಗನೇ ಆದ, ಕವಿಯೇ ಆದವನಾನು ಕನ್ನಡದ ಕವಿಗಳಿಗೊಂದು ಕಿವಿಮಾತು ಕೇಳಿಸಲು, ಕವಿಗಳು ಕೇಳುವಂತೆ ಕೋರುತ್ತೇನೆ. ಕೇಳಿದವರು ಕೇಳಿಸಿದವರನ್ನು ಕಂಡಾದರೂ ಕೇಳಲಿ; ಕೇಳದಿದ್ದವರು ಕೇಳಿಸದಿದ್ದವರು ಕೇಳಿಸಿದವನನ್ನು ಕೋಪದಿಂದ ಕತ್ತು ಹಿಚುಕದಿರಲಿ.

ಕನ್ನಡದ ಕವಿಗಳೇ, ಕನ್ನಡಮ್ಮನ ಕುವರರೇ, ಕುಮಾರವ್ಯಾಸ, ಕಾಳಿದಾಸನ ಕುಲದವರೇ, ಕಲಿಯುಗದ ಕೋಮಲ-ಕಾಮುಕ ಕಾವ್ಯ ಕಲಾವಿದರೇ—ಕಿವಿಮಾತು ಕೇಳಿರಿ. ಕಲಿಯುಗದ ಕವಿಗಳೆಂದೆನೆಂದು ಕೋಪಿಸಬೇಡಿ. ಕಾಮುಕರೆಂದೆನೆಂದು ಕೋಪದಿಂದ ಕುಣಿದಾಡಬೇಡಿ. ಕೋಪವು ಕೊಲೆಗಾರ-ಕೊಳಕು ಎಂದು ಕೇಳಿರಬಹುದು. ಕವಿಗಳು ಕಂಡದ್ದನ್ನು ಕಂಡಂತೆ ಕಂಡವರು ಕೇಳಿಸಿದರೆ ಕುಪಿತರಾಗಬಾರದು. ಕನ್ನಡಿಗನಾದ ರಸಿಕನೂ ಕವಿಯೆಂಬುದನ್ನು ಕನಸಿನಲ್ಲೂ ಕನವರಿಸಿರಿ. ಕಿವಿಮಾತನ್ನು ಕೇಳಿಯೇ ಕೇಳಬೇಕೆಂಬ ‘ಕಂಡಿಶನ್’ ಇಲ್ಲ. ಕವಿಗಳೇ, ಕಾಳಿದಾಸನ ಕಾವ್ಯಗಳನ್ನು ಕೇಳಿದ್ದೀರಾ? ಕುಮಾರವ್ಯಾಸನನ್ನು ಕೇಳಿದ್ದೀರಾ? ‘ಕುಮಾರಸಂಭವ’, ‘ಕಾದಂಬರೀ’ ಕತೆ ಕಂಡಿದ್ದೀರಾ? ಕನ್ನಡಿಗರೆಲ್ಲರ ಕಣ್ಣೆದುರು ಕಾಣಿಸುತ್ತಿರುವ ಕೃಷ್ಣರಾಯರು, ಕಟ್ಟೀಮನಿಯವರ ಕಾದಂಬರಿ, ಕಾವ್ಯನಾಮದಲ್ಲಿ ಕತೆಕೇಳುತ್ತಿರುವ ಕುಳಕುಂದರ ಕತೆ ಕೇಳಿದ್ದೀರಾ? ……………ಕೇಳಿರಬಹುದು. ಕೇಳಿ, ಕಂಡು, ಕೆರಳಿ ಕುತೂಹಲದಿಂದ ಕನ್ನಡದ ಕತೆಗಾರ-ಕವಿಯಾಗುವ ಕನಸು ಕಂಡಿರಬಹುದು.

ಕಾಮಿನಿಯನ್ನಾದರೂ ಕಾಂಚಾನವನ್ನಾದರೂ ಕಾಣದೆ ಕಲಿಯುಗದಲ್ಲಿ ಕವಿತಾಶಕ್ತಿಯೂ ಕಾವ್ಯಸ್ಫೂರ್ತಿಯೂ ಕುಡಿಯಿಡಲಾರದು. ಕಂಡಿತ-

ಕಾಂಚಾನವಂತೂ ಕನ್ನಡದ ಕವಿಗಳಲ್ಲಿ ಕೆಲವರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. “ಕುವೆಂಪು”ರೊಬ್ಬರೇ ಕನ್ನಡದಲ್ಲಿ ಕಾಂಚನವಿರುವ ಕವಿಗಳು.

ಕಿಂಞ್ಞಣ್ಣರೂ ಕನ್ನಡ ಕವಿಗಳೇ— ಕಾಂಚನ ಮಾತ್ರ ಕೈಯಲ್ಲಿಲ್ಲ.

ಕಾಮಿನಿಯರಾದರೆ ಕನ್ನಡದ ಕವಿಗಳಿಗೆ ಕೋಟ್ಯಂತರ ಕಾಣಿಸಿಕೊಳ್ಳುತ್ತಾರೆ.

ಕಾಲೇಜು ಕಲಿತು, ಕೆಲಸವಿಲ್ಲದೆ, ಕೂಳಿಲ್ಲದೆ, ಕಲ್ಯಾಣವಾಗದೆ ಕುಳಿತಾಗ ಕವಿಯಾಗುವ ಕನಸು ಕಾಣುತ್ತೀರಿ. ಕಲ್ಪನೆಯ ಕುಲುಮೆಯಲ್ಲಿ ಕಾಲೇಜಿನಲ್ಲಿ ಕಂಡ ಕುವರಿಯರ ಕನಸನ್ನು ಕುದಿಸಿ ಕತೆಕೀಚುತ್ತೀರಿ. ಕೈಯಲ್ಲಿ ಕಾಸಿಲ್ಲದಿದ್ದರೂ, ಕಾಪಿ ಕುಡಿಯದಿದ್ದರೂ, ಕೂಳು ಕಾಣದೆ ಕೆಲವು ಕಾಲವಾದರೂ, ಕಕ್ಕನ ಕಿಸೆಯಿಂದ ಕೈಗೆಬಂದ ಕಾಲಾಣೆಯಿಂದ ಕಾಗದಕೊಂಡು ಕಾಲೇಜಿನ ಕುವರಿಯರ ಕಟಾಕ್ಷದ ಕುಡಿನೋಟದ ಕನಸು ಕಾಣುತ್ತಾ ಕವಿತೆ ಕೀಚುತ್ತೀರಿ. ಕಲ್ಪನೆಯ ಕುದುರೆಯ ಕಡಿವಾಣವನ್ನು ಕಡಿದುಹಾಕಿ ಕಂಡಕಂಡಂತೆ ಕುಣಿಸಿ ಕಾಲುಮುರಿಸುತ್ತೀರಿ. ಕಾರಣವೇನೆಂದು ಕೇಳುತ್ತೀರಾ? ಕೇಳಿ.

ಕವಿಗೆ ಕವಿಯಾಗಬೇಕೆಂಬ ಕುತೂಹಲ ಸಾಕೆ? ಸಾಕಷ್ಟು ಕಾವ್ಯಾನುಭವವೂ ಬೇಕು. ಕಾವ್ಯಾನುಭವದ ಕೂಡೆ ಕೆಚ್ಚೂ ಕಿಚ್ಚೂ ಇರಬೇಕು. ಕೆಚ್ಚಿಲ್ಲದ ಕವಿಯ ಕುತೂಹಲ ಕೆರಳಿದಾಗ ಕಲ್ಪನೆಯ ಕೈಗೆ ಸಿಕ್ಕಿ ಕಂಡ ಕಡೆಗೆಲ್ಲಾ ಕಾಲುಹಾಕಿ ವಿಕಲ್ಪನಾಗಿ ವಿಕಾರನಾಗಿ, ಕುಪ್ರಸಿದ್ಧ ಕವಿಯಾಗುತ್ತಾನೆ.

ಕವಿಗಳೇ, “ಕಲ್ಪಾಂತರಗಳು ಕಳೆಯುವ ವರೆಗೂ ಕಂಡಕಂಡವರೆದುರು ಕಾಲಾಣೆಗಾಗಿ ಕೈನೀಡಿದರೂ ಕನ್ನಡದ ಕವಿಯಾಗಬೇಡಿ.”

ಕಾರಣವಿಷ್ಟೆ: ಕನ್ನಡದಲ್ಲಿ ಕಾಸು ಮುಖ್ಯ ಕವಿಯೂ ಅಲ್ಲ. ಕವಿತೆಯೂ ಅಲ್ಲ. ಕಾಸಿಲ್ಲದ ಕವಿಗಳನ್ನು ಕಣ್ಣಿನಿಂದಲೂ ಕಾಣುವುದಿಲ್ಲ. ಕಾಸಿದ್ದವರ ಕವಿತೆಗೆ—ಕಾವ್ಯಕ್ಕೆ ಕೋಟಿ ರೂಪಾಯಿ ಕೊಡಲು ಕಾಂಗ್ರೆಸು ಸರಕಾರದ ಕೈಯಲ್ಲಿದೆ. ಕಾಸಿಲ್ಲದವರ ಕವಿತೆ ಕೇಳಲು ಕಿವಿಯೂ ಇಲ್ಲ. ಕಾಸಿಲ್ಲದ ಕವಿತೆಗಳು ಕಲ್ಲಿಗಿಂತಲೂ ಕೀಳು. ಕಸದ ‘ಕುರುವೆ’ಗೆ ಕೂಳು.

ಕನ್ನಡದ ಕವಿಗಳ—ಕಾಸಿಲ್ಲದ—ಕವಿತೆಗಳನ್ನು ಕೆಲವರಾದರೂ ಕೇಳಬೇಕೆ? ಕೊನೆಯ ಕೌಶಲವೊಂದಿದೆ.

ಕವಿತೆಯು ಕಲ್ಪನೆಯ ಕಾಲಡಿ ಕೊಳೆಯದೆ ಕರಾಳತೆಯ ಕೈಹಿಡಿದು ಖೂಂಕರಿಸಲಿ! ಕವಿತೆಯು ಕತ್ತಿಯ ಕುಡಿಯಂತೆ ಕೂರ್ಮೆಯಾಗಿರಲಿ. ಕ್ರಾಂತಿಯ ಕಿಚ್ಚು ಕಾರುತ್ತಿರಲಿ. ಕರ್ರಗಿನ ಕಲ್ಲೆದೆಯೂ ಕರಕರನೆ ಕರಗುವಂತಾಗಲಿ. ಕನ್ನಡದ ಕವಿತೆಗೆ ಕುಬೇರಕುವರ ಕವಿಗಳು ಕಟ್ಟಿದ ಕಾಂಚನದ ಕಟ್ಟೆಯು ಕ್ರಾಂತಿಯ ಕವಿತೆಯ ಕಿಡಿಗೆ ಕೊಚ್ಚಿಹೋಗಲಿ. ಕುಲವಂತ—ಕುಲಹೀನ, ಕುಬೇರ—ಕೂಳಿಲ್ಲದವನೆಂಬ ಕಲ್ಪನೆಯ ಸಂಕಲೆ ಕಡಿದು, ಕೂಡಿಬಾಳಲು ಕಲಿಸುವಂತಹ ಕವಿತೆಗಳು ಕನ್ನಡಿಗರ ಕೈಕತ್ತಿಯಂತಹ ಲೇಖನಿಯಿಂದ ಕೋಡಿಹರಿಯಲಿ! ಕನ್ನಡದ ಅನೇಕ ಕುಲಗಳೆಲ್ಲ ಕದಡಿ ಏಕವಾಗಲಿ. ಕನ್ನಡಮ್ಮನ ಕಾಲಡಿಯಲ್ಲಿ ಕವಿಗಳ ಕವಿತಾ ಕುಸುಮವು ಕಳಕಳಿಸಲಿ. ಕನ್ನಡಮ್ಮನಿಗೆ ಕಲ್ಯಾಣವಾಗಲಿ!

ಒಂದಾಣೆ ಮಾಲೆಯಲ್ಲಿ

ತಾ. 18-1-1958ರ ವರೆಗೆ ಪ್ರಕಟವಾದ ಪುಸ್ತಕಗಳು

೧. ‡ಕೆಪ್ಪಟಿರಾಯ (ವಿನೋದ ಕಥೆ) ದಿ। ಎಂ. ಎನ್. ಕಾಮತ್.
೨. ನಾರೀಶ್ವರರು (ದ್ವಿ. ಮು.) ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೩. ಕಳ್ಳನಿಗೆ ಸಂಭಾವನೆ (ದ್ವಿತೀಯ ಮುದ್ರಣ) ಶ್ರೀ। ಎಲ್. ಎಸ್. ನಾಯಕ.
೪. ‡ಸದ್ರಿ ಸುಬ್ಬ (ಏಕಾಂಕ ಪ್ರಹಸನ) ದಿ। ಎಂ. ಎನ್. ಕಾಮತ್.
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ) ವೈದ್ಯಗುರು ಎಂ. ಆರ್. ಭಟ್.
೬. ‡ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ) ಕುಡ್ಪಿ ವಾಸುದೇವ ಶೆಣೈ.
೭. ‡'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು) ದಿ। ಎಂ.ಎನ್.
೮. ‡ಇಂಗ್ಲಿಷ್–ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ) [ಕಾಮತ್.
೯. ಲಂಚಕ್ಕೆ ಸಂಚಕಾರ (ದ್ವಿತೀಯ ಮುದ್ರಣ) ಡಾ। ಎಸ್. ಪಿ. ಭಟ್.
೧೦. ಟಿಶ್ಯೂ ಔಷಧಿಗಳ ಕೈಪಿಡಿ(ದ್ವಿ. ಮುದ್ರಣ) ಶ್ರೀ। ಪಿ. ಎಸ್. ವೆಂಕಟಕೃಷ್ಣರಾವ್.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ಐದನೇ ಮುದ್ರಣ).
೧೨. ಜೀವದ ಮೌಲ್ಯ (ದ್ವಿತೀಯ ಮುದ್ರಣ) ಶ್ರೀ। ಎಲ್. ಎಸ್. ನಾಯಕ.
೧೩. ‡ಸತ್ತವನ ಸೇಡು ಮತ್ತು ಇತರ ಕಥೆಗಳು ಡಾ। ವಿ. ಆರ್. ಭಟ್.
೧೪. ‡"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ದ್ವಿ. ಮು.)ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ) ದಿ। ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭. ಒಗಟುಗಳು (ತೃತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೮. ಜಗಳಗಂಟಿ ಮತ್ತು ಇತರ ಕಥೆಗಳು (ದ್ವಿ.ಮು.) ವೈದ್ಯಗುರು ಎಂ. ಆರ್. ಭಟ್.
೧೯. ರಥೋತ್ಸವ.
೨೦. ‡ಕರಿನಾಯಿ ಮತ್ತು ಮುಪ್ಪು ದಿ। ಎಂ. ಎನ್. ಕಾಮತ್.
೨೧. ಭಾರತದ ಮಹಾನಗರಗಳು (ದ್ವಿ. ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ) ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು(ದ್ವಿ.ಮು.) ಶ್ರೀ। ಬಿ. ಶಂಕರ ಭಟ್.
೨೪. ಭಾರತದ ಮಹಾನಗರಗಳು (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೫. ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು ಶ್ರೀ। ಎಲ್. ಎಸ್. ನಾಯಕ.
೨೬. ಮಾಕಾವತಾರ (ದ್ವಿತೀಯ ಮುದ್ರಣ) ಶ್ರೀ। ಜಿ.ಆರ್.ಪಾಂಡೇಶ್ವರ.
೨೭. ಹಾಸವಿಲಾಸ [ದ್ವಿ.ಮು.] ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೮. ಸತ್ಯವಂತ ಬಾಬಿ [ದ್ವಿ. ಮು.] ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೯. ಜಾಣ್ಮೆಯ ಒಗಟುಗಳು ಡಾ। ಎಸ್. ಪಿ. ಭಟ್.
೩೦. ಜಾತಕ ಕಥೆಗಳು [ದ್ವಿ.ಮು.] ಶ್ರೀ। ಎಂ. ಸುಬ್ರಾಯನ್.
೩೧. ಕಾರ್ಕಳದ ಚರಿತ್ರೆ ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೩೨. ಮರ್ಜಿ [ಏಕಾಂಕ ಪ್ರಹಸನ] ದಿ। ಎಂ. ಎನ್. ಕಾಮತ್.
೩೩. ದರ್ಶನದ ಕಥೆಗಳು ಶ್ರೀ। ಬಿ.ಶಂಕರ ಭಟ್ಟ ಮತ್ತು ಶ್ರೀ। ಬಿ.ಎಂ.ಶರ್ಮಾ.

೩೪. ಅಳುವಿನ ಹೊಳೆ ಮತ್ತು ಕೇಶವಭೂಪ [ಮಕ್ಕಳ ಕಥೆಗಳು] "ನವಗಿರಿನಂದ."
೩೫. ಶರಾಬಿನ ಪೀಪಾಯಿಗಳು ಶ್ರೀ। ಬಳ್ಳೂಕ್ಕು ಸುಬ್ರಾಯ ಅಡಿಗ.
೩೬. ಗುಮಾನಿಕವಿಯ ಉಪದೇಶ ಶತಕ ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೩೭. ನಿಮಗೆ ಗೊತ್ತಿದೆಯೇ? (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೩೮. ಚತುರ ಚಮತ್ಕಾರ ಡಾ। ಎಸ್. ಪಿ. ಭಟ್.
೩೯. ಸತೀ ಸಾವಿತ್ರಿ [ಏಕಾಂಕ ನಾಟಕ] ಶ್ರೀ। ಪಿ. ವೆಂಕಟರಮಣ ಭಟ್ಟ.
೪೦. ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು. ಶ್ರೀ। ಬಳ್ಳೂರು ಸುಬ್ರಾಯ ಅಡಿಗ.
೪೧. ಭಾರತದ ಮಂತ್ರಿಮಂಡಲಗಳು. (ತೃತೀಯ ಮುದ್ರಣ.)
೪೨. ಕಾಲುಬಳೆಯ ಕತೆ ಶ್ರೀಮತಿ ಬಿ. ಎಸ್. ರತ್ನಮ್ಮ.
೪೩. ಭಾರತದ ನಾಲ್ಕು ಕಲಶಗಳು (ದ್ವಿ. ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು ಶ್ರೀ। ಎಲ್. ಎಸ್. ನಾಯಕ.
೪೫. ಸುಭಾಷಿತ (ನೀತಿವಚನಗಳು) [ದ್ವಿ. ಮು.] ಶ್ರೀ। ಎಂ. ಸುಬ್ರಾಯನ್, ವಿದ್ವಾನ್.
೪೬. ೧೮೫೭ರ "ಸಿಪಾಯಿದಂಗೆ" ಶ್ರೀ। ಸುಭಾಷ್ಚಂದ್ರ ಶೆಣೈ, ಬದಿಯಡ್ಕ.
೪೭. ಅಕಾಂಡತಾಂಡವ (ರೇಡಿಯೋ ನಾಟಕ) ಶ್ರೀ। ಬಿ. ದಾಮೋದರ ಬಾಳಿಗ, ಬಿ.ಎ.
೪೮. ಸಾಹಸದ ಕಥೆಗಳು ಶ್ರೀ। ಕುಡ್ಪಿ ವಾಸುದೇವ ಶೆಣೈ.
೪೯. ಸಂಜ್ಞಾ ಜ್ಞಾನಕೋಶ (ಪ್ರಥಮ ಭಾಗ) ಡಾ। ಎಸ್. ಪಿ. ಭಟ್.
೫೦. ಪಂಡಿತನ ಪಿಟೀಲು ಶ್ರೀ। ಕುಡ್ಪಿ ವಾಸುದೇವ ಶೆಣೈ.
೫೧. ಭೋಗಯಾತ್ರೆ (ಆಚಾರ್ಯ ವಿನೋಬಾಭಾವೆ) ಶ್ರೀ। ಎಲ್. ಎಸ್. ನಾಯಕ.
೫೨. ಸಂಗ್ರಾಮಸಿಂಹ (ಐತಿಹಾಸಿಕ ಕಥನ) ಶ್ರೀ। ಅ. ಗೌ. ಕಿನ್ನಿಗೋಳಿ ವಿದ್ವಾನ್.
೫೩. ಧರ್ಮ ಶಿಕ್ಷಾ ಶ್ರೀ। ಕೋ. ಶ. ಕಾರಂತ, ಬಿ. ಎ., ಬಿ. ಎಲ್., ಎಡ್ವೊಕೇಟ್.
೫೪. ಮಹಾತ್ಮ (ಪೂಜ್ಯ ಬಾಪೂಜಿ) ಶ್ರೀ। ಎಲ್. ಎಸ್. ನಾಯಕ್.
೫೫. ಮೀರಾಬಾಯಿ (ಏಕಾಂಕ ನಾಟಕ) ಶ್ರೀ। ಸಂ. ಜ. ರಾವ್.
೫೬. ವೀರರಮಣಿ ಕರ್ಮದೇವಿ ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೫೭. ಅರಳಿದ ನಗು ಶ್ರೀ। ಬಳ್ಳೂರು ಸುಬ್ರಾಯ ಅಡಿಗ, ವಿದ್ವಾನ್.
೫೮. ಸಚಿತ್ರ ಜಪಾನ್ ಶ್ರೀ। ಟಿ. ರಮೇಶ ಪೈ.
೫೯. ಚುಟ್ಟಬಿಟ್ಟದಿಟ್ಟ (ಏಕಾಂಕ ಪ್ರಹಸನ) ಡಾ। ಎಸ್. ಪಿ. ಭಟ್.
೬೦. ನಿರಪರಾಧಿ ಶ್ರೀ। ಎಲ್. ಎಸ್. ನಾಯಕ್.
೬೧. ಭಕ್ತವಾಣಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ.
೬೨. ಜಾನಪದ ಸಾಹಿತ್ಯ ಶ್ರೀ। ಪಡಾರು ಮಹಾಬಲೇಶ್ವರ ಭಟ್.
೬೩. ಡಾಕ್ಟರ್ ಆರೋಗ್ಯಮ್ ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೬೪. ಲೌಕಿಕ ನ್ಯಾಯಗಳು ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ.
೬೫. ‡ಶಿಶುಪಾಲ ಮಾನಭಂಗ ಶ್ರೀ। ಕೆ. ಸುಭಾಷಚಂದ್ರ ಶೆಣೈ, ಬದಿಯಡ್ಕ.
೬೬. ಜರಾಸಂಧ ವಧೆ (ಏಕಾಂಕ) ಶ್ರೀ। ಎ. ವಿ. ಮಯ್ಯ, ಬಂಟ್ವಾಳ.
೬೭. ಪ್ರಧಾನಾಮಾತ್ಯ ಪಂಡಿತ ಜವಾಹರಲಾಲ ನೆಹರು ಶ್ರೀ। ಕುಡ್ಪಿ ವಾಸುದೇವ ಶೆಣೈ.
೬೮. ಕರುಣೆ ಮತ್ತು ಇತರ ಕಥೆಗಳು ಶ್ರೀ। ಬಳ್ಳೂರು ಸುಬ್ರಾಯ ಅಡಿಗ.

೬೯. ಶ್ರೀಕ್ಷೇತ್ರ ಉಡುಪಿ [ದ್ವಿ.ಮು.] — ಶ್ರೀ| ಕೆ. ಪ್ರಭಾಕರ ರಾವ್.
೭೦. ವಿನೋದ ವಿಹಾರ — —(ಆರಿಸಿ ತೆಗೆದ ನಗೆಹನಿಗಳು)
೭೧. ಭಾರತದ ಗತವೈಭವ — ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೭೨. ಸತ್ಯ ಹರಿಶ್ಚಂದ್ರ (ದ್ವಿತೀಯ ಮುದ್ರಣ) — ಶ್ರೀ| ಪಿ. ವೆಂಕಟ್ರಮಣ ಭಟ್ಟ.
೭೩. ಸೂಕ್ತಿಗಳು — ಶ್ರೀ| ಕೆ. ವೆಂಕಟರಾಯಾಚಾರ್ಯ.
೭೪. ಯಕ್ಷಗಾನ ಕಲಾವಿದರು (ನಟರ ಪರಿಚಯ) ಶ್ರೀ| ವಿಘ್ನೇಶ್ವರ ಶರ್ಮಾ ತದ್ದಲಸೆ.
೭೫. ದೇವರ ಸಾಮ್ರಾಜ್ಯದಲ್ಲಿ ಮತ್ತು ಇತರ ಕಥೆಗಳು — ಶ್ರೀ| ಎಸ್. ಎನ್. ನವಕಾನ.
೭೬. ಕ್ರಾಂತಿಕಂಠೀರವ ಭಗತ್ ಸಿಂಘ — ಶ್ರೀ| ಸತ್ಯಾಶ್ರಯ ಕಾಮತ್.
೭೭. ಜಾತಕಫಲನ ಮತ್ತು ಇತರ ಕಥೆಗಳು — ಶ್ರೀ| ಕುಡ್ಪಿ ವಾಸುದೇವ ಶೆಣೈ.
೭೮. ಅಮೃತವಾಣಿ (ಲೋಕನಾಯಕರ ವಚನಗಳು) — ಶ್ರೀ| ಎಮ್. ಶ್ರೀಧರ ಕಿಣಿ.
೭೯. ಮಾಯಾಮೃಗ (ಏಕಾಂಕ ನಾಟಕ) — ಶ್ರೀ| ಎ. ವಿ. ಮಯ್ಯ.
೮೦. ಡಾಕ್ಟರ್ ಗಾಂಧೀಜಿ — ಶ್ರೀ| ಮರಕ್ಕಿಣಿ ಶಂಕರನಾರಾಯಣ ಭಟ್.
೮೧. ಶ್ರೀಶಂಕರಾಚಾರ್ಯರ ಜೀವನಚರಿತ್ರೆ(ತೃ.ಮು.) ಡಾ| ಪಿ.ಎಸ್.ವಾಸುದೇವ ಶರ್ಮ.
೮೨. " ವಿರಚಿತ ಸ್ತೋತ್ರಗಳು " — " "
೮೩. ಬೆಡಗಿನ ನಾಡು—ಕೊಡಗು: ಶ್ರೀ| ಶ್ರೀಪತಿರಾವ್ ಫಲಿಮಾರ್ಕರ್, ಬಿ.ಎ, ಬಿ.ಟಿ.
೮೪. ಆನೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು. — ಶ್ರೀ| ಎಲ್. ಎಸ್. ನಾಯಕ್.
೮೫. ಮಂಗಳೂರಿಂದ ಮಧುರೆಗೆ — ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೮೬. ಸತೀ ವೃಂದಾ (ಏಕಾಂಕ ನಾಟಕ) — ಶ್ರೀ| ಕೆ. ಸುಭಾಷ್ಚಂದ್ರ ಶೆಣೈ.
೮೭. ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ (ಎರಡು ಏಕಾಂಕಗಳು)
೮೮. ಗೃಹವೈದ್ಯ (ದ್ವಿತೀಯ ಮುದ್ರಣ) — ಶ್ರೀ| ಬಳ್ಕೂರು ಸುಬ್ರಾಯ ಅಡಿಗ.
೮೯. ನಮ್ಮ ನಾಟಕಗಳು — ಶ್ರೀ| ಎಂ. ಎಸ್. ಆಚಾರ್.
೯೦. ಜಾನಪದ ಕಥೆಗಳು — ಶ್ರೀ| ಕೆ. ವೆಂಕಟರಾಯಾಚಾರ್ಯ.
೯೧. ಕೆಲವು ಉಪಯುಕ್ತ ಸಲಹೆಗಳು — ಶ್ರೀ| ಬಳ್ಕೂರು ಸುಬ್ರಾಯ ಅಡಿಗ.
೯೨. ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ — ಶ್ರೀ| ಕೆ.ಎಲ್.ಎನ್. ಉಪಾಧ್ಯಾಯ.
೯೩. ಹೋಮಿಯೋಪತಿ ಚಿಕಿತ್ಸಾಸಾರ — ಶ್ರೀ| ಬೋಳೂರು ಎಸ್. ರಾವ್.
೯೪. ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು ಶ್ರೀ| ಮಂಜುನಾಥ ಭಾಗವತ.
೯೫. ಪುನರುಜ್ಜೀವನ (ಏಕಾಂಕ ನಾಟಕ) — ಶ್ರೀ| ಗೋವಿಂದ ಭಟ್ಟ, ಶೇಡಿಗುಮ್ಮೆ.
೯೬. ಪ್ರಥಮ ಚಿಕಿತ್ಸೆಯ ಕೈಪಿಡಿ — ಶ್ರೀ| ಬೋಳೂರು ಎಸ್. ರಾವ್.
೯೭. ಹಸ್ತರೇಖಾ ವಿಜ್ಞಾನ — ಡಾ| ಕೆ. ಕೆ. ಕಲ್ಕೂರ್.
೯೮. ಸ್ವಾತಂತ್ರ್ಯ (ಏಕಾಂಕ ನಾಟಕ) — ಶ್ರೀ| ಕೆ. ಎನ್. ಭಟ್, ಶಿರಾಡಿಪಾಲ್.
೯೯. ಭಾರತೀಯ ಸ್ವಾತಂತ್ರ್ಯಸಂಗ್ರಾಮ — ಶ್ರೀ| ಎಮ್. ರಘುನಂದನ ರಾವ್.
೧೦೦. ಭಕ್ತ ಕುಚೇಲ (ಏಕಾಂಕ ಸಂಗೀತ ನಾಟಕ) (ದ್ವಿ. ಮು.) ಶ್ರೀ| ಅಂಬಾತನಯ.
೧೦೧. ಉತ್ತರನ ಪೌರುಷ (ಯಕ್ಷಗಾನ) — ಶ್ರೀ| ಪುಟ್ಟಣ್ಣ.
೧೦೨. ಕುಮಾರ (ವಿನೋದ ಕಥೆ) — ಶ್ರೀ| ಕುಡ್ಪಿ ವಾಸುದೇವ ಶೆಣೈ.
೧೦೩. ಕೇರಳ ಜ್ಯೋತಿಷ (ಪ್ರಮುಖ ಯೋಗಗಳು) — ವೈದ್ಯಗುರು ಎಂ. ಆರ್. ಭಟ್.

೧೦೪.	ಒಗಟುಗಳ ಗೊಂಚಲು (ಒಗಟುಗಳು ಭಾಗ ೩)	ಡಾ| ಎಸ್. ಪಿ. ಭಟ್.
೧೦೫.	ಊರ-ಔಷಧಿಗಳು (ದ್ವಿ. ಮುದ್ರಣ)	ಶ್ರೀ| ಬೋಳೂರು ಎಸ್. ರಾವ್.
೧೦೬.	ಮದ್ವೆ ಅವಾಂತರ (ಏಕಾಂಕ ಪ್ರಹಸನ)	"ಅಷ್ಟಾವಕ್ರ".
೧೦೭.	ಜಗತ್ತಿನ ವಿಜ್ಞಾನಿಗಳು	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೧೦೮.	ನಮ್ಮ ದೇಶ	ಶ್ರೀ| ಕುಡ್ಪಿ ವಾಸುದೇವ ಶೆಣೈ.
೧೦೯.	ಗ್ರಾಮ ಸ್ವಾತಂತ್ರ್ಯ (ಏಕಾಂಕ)	ಶ್ರೀ| ಎ. ವಿ. ಮಯ್ಯ.
೧೧೦.	ನಮ್ಮ ಕನ್ನಡ ನಾಡು	ಶ್ರೀ| ಕುಡ್ಪಿ ವಾಸುದೇವ ಶೆಣೈ.
೧೧೧.	ಭಕ್ತ ಧ್ರುವ (ಏಕಾಂಕ ನಾಟಕ)	ಶ್ರೀ| ಸುಬ್ರಾಯ, ಅನಂತಪುರ.
೧೧೨.	ಕರ್ಣಾಟಕ ಕವಿಚರಿತ್ರೆ	ಶ್ರೀ| ಬಿ. ಈಶ್ವರಯ್ಯ.
೧೧೩.	ಬೇಡನ ಮಗಳು (ಏಕಾಂಕ ನಾಟಕ)	ಶ್ರೀ| ವೆಂಕಟರಾಜ ಪುಣಿಂಚತ್ತಾಯ.
೧೧೪.	ಸ್ವಾಮಿ ವಿವೇಕಾನಂದ	ಶ್ರೀ| ಎಂ. ಕೃಷ್ಣರಾವ್, ಬಿ.ಎ.
೧೧೫.	ನಮ್ಮ ಆಹಾರ	ಶ್ರೀ| ಕೆ. ಸಿ. ವೈದ್ಯರ್.
೧೧೬.	ಗಾದೆಗಳೂ ಜ್ಞಾನೋಕ್ತಿಗಳೂ	ಶ್ರೀಮತಿ ಬೇಬಿ ಸರೋಜಿನಿ.
೧೧೭.	ಪುರಂದರದಾಸರು [ಏಕಾಂಕ ನಾಟಕ]	ಶ್ರೀ| ಪದ್ಮನಾಭ ಸೋಮಯಾಜಿ.
೧೧೮.	ಮನುಷ್ಯಯಜ್ಞ	ಶ್ರೀ| ಬಿ. ಶಂಕರ ಭಟ್ಟ.
೧೧೯.	ಹೆಮ್ಮಕ್ಕಳ ಹಾಡುಗಳು	ಶ್ರೀ| ಪಡಾರು ಮಹಾಬಲೇಶ್ವರ ಭಟ್.
೧೨೦.	ನಮ್ಮ ಹಬ್ಬಗಳು	ಶ್ರೀ| ಶ್ಯಾಮ್, ಪುತ್ತೂರು.
೧೨೧.	ವೀರಾಗ್ರಣಿ ಕರ್ಣ (ಏಕಾಂಕ ನಾಟಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೧೨೨.	ಸೂರ್ಯನೇ ನನಗೆ ಸಾಕ್ಷಿ ಮತ್ತು ಇತರ ಕಥೆಗಳು	ಶ್ರೀ| ಎನ್.ಎಸ್.ನವಕಾನ.
೧೨೩.	ನವ ಕೈಲಾಸ (ಯಕ್ಷಗಾನ)	ಶ್ರೀ| ಮಾಳಕೋಡ ನಾರಾಯಣ.
೧೨೪.	ಕುಶ-ಲವ (ಏಕಾಂಕ ಪೌರಾಣಿಕ ನಾಟಕ)	ಶ್ರೀ| ಬಿ. ಈಶ್ವರಯ್ಯ.
೧೨೫.	ಅಮರನಾಥ ಯಾತ್ರೆ	ಶ್ರೀ| ಗುಂಡ್ಮಿ ಮಹಾಬಲ ಭಟ್.
೧೨೬.	ಸಂಜ್ಞಾ ಪ್ರಾಧ್ಯಾಪಕ ಮತ್ತು ಇತರ ಕಥೆಗಳು	ಶ್ರೀ| ಎಂ.ಕೃಷ್ಣರಾವ್, ಬಿ.ಎ.
೧೨೭.	ದ್ವಾರಕಾ	ಶ್ರೀ| ಗುಂಡ್ಮಿ ಮಹಾಬಲ ಭಟ್.
೧೨೮.	ಭಾರತದ ಸಂಗೀತ ಜ್ಯೋತಿಗಳು	ಶ್ರೀ| ಎಚ್. ಸುಂದರರಾಮರಾವ್.
೧೨೯.	ಮಕ್ಕಳ ಪದ್ಯಗಳು	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್.
೧೩೦.	ನಯೆ ಪೈಸೆ	
೧೩೧.	ತಾಯಿಗಾಗಿ ಮತ್ತು ಇತರ ಕಥೆಗಳು	ಶ್ರೀ| ಬಿ.ಶಂಕರಭಟ್, ವಿದ್ವಾನ್.
೧೩೨.	ಸಂತ ಮೀರಾಬಾಯಿಯ ಭಜನಾ ಗೀತಗಳು.	ಶ್ರೀ| ಎಚ್.ಸುಂದರರಾಮರಾವ್.
೧೩೩.	ಅಕ್ಷಯಪಾತ್ರೆ (ಏಕಾಂಕ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೩೪.	ಉ.ಕ.ದ ಯಕ್ಷಗಾನ ಮಂಡಲಿಗಳು	ಶ್ರೀ|ಮಂಜುನಾಥ ಭಾಗವತ, ಕಡತೋಕ.
೧೩೫.	ಅಕ್ಬರ-ಬೀರಬಲ ವಿನೋದ (ದ್ವಿ. ಮು.)	ಶ್ರೀ| ಮಾಧವ ಭಟ್, ಮಡಿಕೇರಿ.
೧೩೬.	ವೈರಾಗ್ಯನಿಧಿ (ಏಕಾಂಕ)	ಶ್ರೀ| ಕೆ. ಎಸ್. ಶರ್ಮಾ, ವಿದ್ವಾನ್.
೧೩೭.	ಭರತನ ಬಂಧುಪ್ರೇಮ (ಏಕಾಂಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೧೩೮.	ದ್ವಾದಶ ಜ್ಯೋತಿರ್ಲಿಂಗಗಳು	ಶ್ರೀ| ಗುಂಡ್ಮಿ ಮಹಾಬಲ ಭಟ್ಟ.

೧೩೯.	ಪರೀಕ್ಷೆ ಮತ್ತು ಇತರ ಕಥೆಗಳು	ಶ್ರೀ| ಎಂ. ಗೋಪಾಲ ಭಟ್
೧೪೦.	ಗಿಲ್ಟು ಮಾಡುವ ವಿಧಾನಗಳು	ಶ್ರೀ| ಎಂ. ಶ್ರೀನಿವಾಸರಾ
೧೪೧.	ಕನ್ನಡ ಗಾದೆಗಳು	ಶ್ರೀ| ಕುರಾಡಿ ಸೀತಾರಾಮ ಅ
೧೪೨.	ಮಹಾತ್ಮಾ ಉದಂಕ (ಏಕಾಂಕ ನಾಟಕ)	ಮಣೆಲ "ಶಿವಶಂ
೧೪೩.	ಭಕ್ತ ಪ್ರಹ್ಲಾದ (ಪೌರಾಣಿಕ ಏಕಾಂಕ ನಾಟಕ)	ಶ್ರೀ| ಎ. ವಿ. ವ
೧೪೪.	ಧುನಿರಾಣಿ ಗಂಗೆ	ಶ್ರೀ| ಕೆ. ಸುಭಾಷ್ಚಂದ್ರ
೧೪೫.	ಸರ್ವಜ್ಞ ವಚನಗಳು [ಭಾಗ ೧]	ಶ್ರೀ| ಕುಡ್ವಿ ವಾಸುದೇವ
೧೪೬.	ಅಭಿಮನ್ಯು ಅಥವಾ ಚಕ್ರವ್ಯೂಹ	ಶ್ರೀ| ಬಿ. ಈಶ್ವರಯ್ಯ, ಪೆ
೧೪೭.	ಗಾನ ಕುಸುಮ (ಮಕ್ಕಳ ಹಾಡುಗಳು)	ಶ್ರೀ| ಕೆ. ಎಸ್. ಪದ್ಮನಾಭ ಆಚಾರ್ಯ
೧೪೮.	ಚಾಣಕ್ಯ ಶತಕ—ಭಾಗ ೧	ಡಾ| ಟಿ. ಪಿ. ಭಟ್, ಮಂಗಳೂರು
೧೪೯.	ಚಾಣಕ್ಯ ಶತಕ—ಭಾಗ ೨	,, ,,
೧೫೦.	ವರಕವಿ ಮುದ್ದಣ	ಶ್ರೀ| ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೫೧.	ಲೋಕಮಾನ್ಯ ಬಾಲಗಂಗಾಧರ ತಿಲಕ	ಶ್ರೀ| ಟಿ. ರಘುನಂದನರಾವ್.
೧೫೨.	ಮುಚ್ಚಗಳು: ಅದರ ಪರಿಣಾಮಗಳು	ವೈದ್ಯಗುರು ಎಂ. ಆರ್. ಭಟ್.
೧೫೩.	ಭಾರತದ ವೀರನಾರಿಯರು (ಕತೆಗಳು)	
೧೫೪.	ಮೂಕರಾಣಿ (ಕತೆ)	ಸಾಮ್ರಾಟ್ ವಿಕ್ರಮಾದಿತ್ಯನ ಒಂದು ಕಥೆ.
೧೫೫.	ಅಷ್ಟಾವಕ್ರ ಮತ್ತು ನಿವೃತ್ತಿ ನಿರತ	ವೈದ್ಯಗುರು ಎಂ. ಆರ್. ಭಟ್.
೧೫೬.	ನಮ್ಮ ಮೈಸೂರು ರಾಜ್ಯ	
೧೫೭.	ವಿನೋದ ಗಣಿತ	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೧೫೮.	ವಿಷಬೀಜ (ಪೌರಾಣಿಕ ಏಕಾಂಕ)	ಶ್ರೀ| ಕೆ. ಗೋವಿಂದ ಭಟ್ಟ.
೧೫೯.	ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು	ಶ್ರೀ| ವೈ. ಮಹಾಲಿಂಗ ಭಟ್ಟ.
೧೬೦.	ಬಲಿಬಂಧನ (ಪೌರಾಣಿಕ ಏಕಾಂಕ)	ಶ್ರೀ| ಎಸ್. ತಿರುಮಲೇಶ್ವರ ಭಟ್.
೧೬೧.	ವೀರ ಜನನಿ (ಗೀತಾ ನಾಟಕ)	ಶ್ರೀ| ಎಸ್. ಗೋಪೀಚಂದರಾವ್.
೧೬೨.	ವಿಷದ ಅಂಗಿ ಮತ್ತು ಇತರ ಕಥೆಗಳು	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೧೬೩.	ಶಕುಂತಲಾ (ಪೌರಾಣಿಕ ಏಕಾಂಕ)	ಶ್ರೀ| ಬಿ. ಈಶ್ವರಯ್ಯ.
೧೬೪.	ಶ್ರೀ ಪುರಂದರದಾಸರ ಭಜನಾಗೀತಗಳು	ಶ್ರೀ| ಎಚ್. ಸುಂದರರಾಮರಾವ್.
೧೬೫.	ಪಂಚಕನ್ಯೆಯರು ಮತ್ತು ಚಿರಂಜೀವಿಗಳು	ಶ್ರೀ| ಸಿ. ಗೋಪಾಲಕೃಷ್ಣಾಚಾರ್ಯ.
೧೬೬.	ರುಕ್ಮಾಂಗದ (ಸಂಗೀತ ಏಕಾಂಕ)	ಶ್ರೀ| ಅಂಬಾತನಯ.
೧೬೭.	ಇಸೋಪನ ಕಥೆಗಳು (ಭಾಗ ೧)	ಶ್ರೀ| ಕುಡ್ವಿ ವಾಸುದೇವ ಶೆಣೈ.
೧೬೮.	ಕನಕದಾಸರ ಭಜನಾಗೀತಗಳು	ಶ್ರೀ| ಕುಡ್ವಿ ವಾಸುದೇವ ಶೆಣೈ.
೧೬೯.	ಶ್ರೀ ವಾದಿರಾಜಸ್ವಾಮಿಗಳ ಭಜನಾಗೀತಗಳು	
೧೭೦.	ಮಾಣಿಯ ಮಡದಿ ಮಕ್ಕಳು	'ರಸಿಕ', ಪುತ್ತಿಗೆ.

ವಿಶೇಷ ಪ್ರಕಟಣೆ: ಮಕ್ಕಳ ಹಾಡುಗಳು (ದ್ವಿತೀಯ ಮುದ್ರಣ)

‡ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ವಣಾತಿಗಳ ಮೇಲೆ ಅತ್ಯಧಿಕ ಬಡ್ಡಿ ದರಗಳು

ಕ್ಸ್ಡ್ ಡಿಪಾಜಿಟ್‌ಗಳ ಮೇಲೆ ವರ್ಷಕ್ಕೆ **3%** ರಂತೆ	ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ನ ಮೇಲೆ ವರ್ಷಕ್ಕೆ **2½%** ವರೆವಿಗೂ

ಅಲ್ಪಾವಧಿ ಮತ್ತು ನಿರ್ದಿಷ್ಟಕಾಲದ ಠೇವಣಾತಿಗಳಿಗೆ

ಅತ್ಯಂತ ಆಕರ್ಷಕ ದರಗಳು

ಹೆಚ್ಚಿನ ವಿವರಗಳಿಗೆ
ನಿಮ್ಮ ಸಮೀಪದ ಬ್ರಾಂಚ್ ಮ್ಯಾನೇಜರರಲ್ಲಿ ವಿಚಾರಿಸಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ
ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದದ್ದು.

Edited, Printed & Published by K. V. Shenoy
at the Prabhat Printers, Ltd., Mangalore.